# **ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ**

# **ಬಳ್ಳಾರಿ**

## **ವಿಶೇಷ ಮೊಕದ್ದಮೆ ಸಂಖ್ಯೆಃ 1415/2019**

**ಪಿ.ಡಬ್ಲ್ಯೂಃ 1 (ಸಿಡಬ್ಲ್ಯೂಃ 1)**

| | | |
|---|---|---|
| **ಸಾಕ್ಷಿದಾರರ ಹೆಸರು** | **:** | **ಶ್ರೀ ಟಿ. ನರಸಿಂಹ** |
| **ತಂದೆಯ ಹೆಸರು** | **:** | **ಟಿ. ಕುಮಾರಸ್ವಾಮಿ** |
| **ವಯಸ್ಸು** | **:** | **42 ವರ್ಷ** |
| **ಕೆಲಸ** | **:** | **ವ್ಯವಸಾಯ** |
| **ವಾಸ ಸ್ಥಳ** | **:** | **ಸಂಡೂರು** |

**ಸಾಕ್ಷಿಯನ್ನು ದಿನಾಂಕ 09.07.2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು ಪರಿಶಿಷ್ಟ ಪಂಗಡಕ್ಕೆ ಸೇರಿದ್ದೇನೆ ಮತ್ತು ಸಂಡೂರಿನಲ್ಲಿ ವಾಸ ಇದ್ದು ಅಲ್ಲಿ ವ್ಯವಸಾಯ ಮಾಡಿ ಜೀವನ ಮಾಡುತ್ತಿದ್ದೇನೆ. ನನಗೆ ದೌಲತ್ಪುರ ಗ್ರಾಮದ ಸರ್ವೆ ನಂಃ331 ರಲ್ಲಿ 1 ಎಕರೆ 75 ಸೆಂಟ್ಸ್ ಜಮೀನು ಇದೆ. ಆ ಜಮೀನು ಒಣ ಜಮೀನು ಇದ್ದು, ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಬೋರ್ವೆಲ್ ತೆಗೆಸಿದ್ದೇನೆ. ನಾನು ನನ್ನ ಜಮಿನಿನಲ್ಲಿ ಬೋರ್ವೆಲ್ ತೆಗೆಸಿದ ನಂತರ ವಿದ್ಯುತ್ ಸಂಪರ್ಕ ಕೊಡಿಸಲು ಕೆಇಬಿ ಸಂಡೂರು ರವರಿಗೆ ಅರ್ಜಿ ಸಲ್ಲಿಸಿರುತ್ತೇನೆ. ಜೆಸ್ಕಾಂ ಸಿಬ್ಬಂದಿಗಳು ಎಸ್ಟಿಮೇಶನ್ ಮಾಡುವ ಸಲುವಾಗಿ ನನ್ನ ಹೊಲಕ್ಕೆ ಬಂದು ಎಸ್ಟಿಮೇಟ್

ಮಾಡಿ ನನ್ನ ಕಚೇರಿಗೆ ಬಂದು ಕಾಣುವಂತೆ ಜೆ.ಇ ರವರು ನನಗೆ ತಿಳಿಸಿದರು. ನಾನು 2-3 ಬಾರಿ ಜೆ.ಇ ರವರನ್ನು ಬೇಟಿ ಮಾಡಲು ಹೋದಾಗ ಅವರು ನನಗೆ ಸಿಗಲಿಲ್ಲ. ಹೀಗೆ ಸತಾಯಿಸುವ ಕಾರಣ ಕಂಪ್ಲೆಂಟ್ ಮಾಡು ಎಂದು ಯಾರೋ ಒಬ್ಬರು ನನಗೆ ತಿಳಿಸಿದರು. ಆಗ ನಾನು ಎ.ಸಿ.ಬಿ ಕಚೇರಿಗೆ ಹೋಗಿ ದೂರು ನೀಡಿದ್ದೇನೆ. ದೂರನ್ನು ನೀಡಿದ ದಿನಾಂಕ ನೆನಪಿಲ್ಲ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ದೂರಿನಲ್ಲಿ ಕೆ.ಇ.ಬಿ ರವರು ಕೆಲಸ ಮಾಡಿ ಕೊಡುತ್ತಿಲ್ಲ , ಸತಾಯಿಸುತ್ತಿದ್ದಾರೆ ಎಂದು ಹೇಳಿದ್ದೇನೆ. ಸಿಬ್ಬಂದಿಗಳು ಸತಾಯಿಸುತ್ತಿದ್ದಾರೆ ಎಂದು ಹೇಳಿದ್ದೇನೆ ಆದರೆ ಅವರ ಹೆಸರು ನೆನಪಿಲ್ಲ. ನನಗೆ ದೂರನ್ನು ಬರೆಯಲು ಗೊತ್ತಿಲ್ಲದ ಕಾರಣ ಎಸಿಬಿ ಕಚೇರಿಯ ಸಿಬ್ಬಂದಿಗಳೇ ದೂರನ್ನು ಬರೆದಿದ್ದಾರೆ. ದಾಳಿ ಮಾಡುವ ಪ್ರಕ್ರಿಯೆಗೆ ಹಣ ಕೊಡುವಂತೆ ಎಸಿಬಿ ಅಧಿಕಾರಿ ಕೇಳಿದರು , ನಾನು ನನ್ನಲ್ಲಿ ಹಣ ಇಲ್ಲ ಎಂದು ಹೇಳಿದೆ. ಎಸಿಬಿ ಕಚೇರಿಯಲ್ಲಿ ಅವರೇ ಹಣ ಹಾಕಿ ಬರವಣಿಗೆ ಮಾಡಿದರು. ಆ ಸಮಯದಲ್ಲಿ ಇಬ್ಬರು ಪಂಚರನ್ನು ಕರೆಸಿದ್ದರು. ಅವರ ಹೆಸರು ನಾಗರಾಜ , ಇನ್ನೊಬ್ಬನ ಹೆಸರು ನೆನಪಿಲ್ಲ. ನನ್ನ ಸಮಕ್ಷಮ ದಲ್ಲಿ ಕೆಲವು ಕೆಮಿಕಲ್‌ಗಳನ್ನು ಹಾಕಿ ದ್ರಾವಣ ತಯಾರಿಸಿದರು. ಏನು ಪ್ರಕ್ರಿಯೆ ಮಾಡಿದ್ದಾರೆ ಎಂದು ನೆನಪಿಲ್ಲ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು **ನಿಪಿ.2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.2(ಎ)** ಎಂದು ಗುರುತಿಸಲಾಯಿತು. ಪ್ರಕ್ರಿಯೆ ಕಾಲದಲ್ಲಿ ಫೋಟೋ ತೆಗೆದಿದ್ದಾರೆ, ಸದರಿ ಪೋಟೋಗಳನ್ನು ಗುರುತಿಸುತ್ತೇನೆ. ಅವುಗಳನ್ನು **ನಿಪಿ.3 ರಿಂದ ನಿಪಿ.10** ಎಂದು ಗುರುತಿಸಲಾಯಿತು.

**2.** ನನ್ನ ಹತ್ತಿರ ಮೊಬೈಲ್ ಇದೆ. ಅದರ ಸಂಖ್ಯೆ: 9900754102 . ನನ್ನ ಮೊಬೈಲ್ ನ್ನು ಎಸಿಬಿ ಅಧಿಕಾರಿಗೆ ನಾನು ಕೊಟ್ಟಿಲ್ಲ. ನಿ.ಪಿ.2 ಪ್ರಕ್ರಿಯೆ ಮುಗಿದ ನಂತರ ನಾನು , ಪೊಲೀಸರು , ಪಂಚರು ಸೇರಿಕೊಂಡು ಪೊಲೀಸ್ ವಾಹನದಲ್ಲಿ ಕೆಇಬಿ ಕಚೇರಿಗೆ ಹೋಗಿದ್ದೇವೆ.

ಇನ್ಸಪೆಕ್ಟರ್ ರವರು ನನಗೆ ನಾನು ಕೊಟ್ಟ ಹಣವನ್ನು ಸಿಬ್ಬಂದಿಗೆ ಕೊಟ್ಟು ಹೊರಗೆ ಬಂದು ತಲೆ ಸವರುವ ಮೂಲಕ ಸೂಚನೆ ಕೊಡಬೇಕು ಎಂದು ಹೇಳಿದರು. ನಾನು ಕೆಇಬಿ ಕಚೇರಿಗೆ ಹೋಗಿ ವೆಂಕಟೇಶ ರವರನ್ನು ಬೇಟಿಯಾದೆನು. ಸದರಿ ವೆಂಕಟೇಶ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿದ್ದಾನೆ. ನಾನು ವೆಂಕಟೇಶನನ್ನು ಮಾತನಾಡಿಸಲು ಪ್ರಯತ್ನಿಸಿದಾಗ ಅವರು ಆಮೇಲೆ ಸಿಗುತ್ತೇನೆ ಎಂದು ನನಗೆ ಹೇಳಿದರು. ಆಗ ನಾನು ಎಸಿಬಿ ಸಿಬ್ಬಂದಿಗಳು ನನಗೆ ಹೇಳಿದಂತೆ ಹಣವನ್ನು ಆರೋಪಿಯ ಪ್ಯಾಂಟ್ ಜೇಬಿನಲ್ಲಿ ಇಟ್ಟು ಹೊರಗಡೆ ಬಂದೆನು. ಎಸಿಬಿ ಸಿಬ್ಬಂದಿಗಳು ಬಂದು ಪಂಚನಾಮೆ ಮಾಡಿದ್ದಾರೆ, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು **ನಿಪಿ.11** ಎಂದು ಸಾಕ್ಷಿಯ ಸಹಿಯನ್ನು **ನಿಪಿ.11(ಎ)** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳನ್ನು ಗುರುತಿಸುತ್ತೇನೆ. 6 ಫೋಟೋಗಳನ್ನು **ನಿಪಿ.12** ರಿಂದ **ನಿಪಿ.17** ಎಂದು ಗುರುತಿಸಲಾಯಿತು.

**3.** ಲೋಕಯುಕ್ತ ಕಚೇರಿಯವರು ನನ್ನನ್ನು ನಂತರದಲ್ಲಿ ಅವರ ಕಚೇರಿಗೆ ಕರೆಸಲಿಲ್ಲ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು **ನಿಪಿ.18** ಎಂದು, ಸಾಕ್ಷಿಯ ಸಹಿಯನ್ನು ನಿಪಿ.**18(ಎ)** ಎಂದು ಗುರುತಿಸಲಾಯಿತು. ಈಗ ತೋರಿಸಿದ ಪೋಟೋಗಳನ್ನು ಗುರುತಿಸುತ್ತೇನೆ. ಸದರಿ ಪೋಟೋಗಳಲ್ಲಿ ನಾನು ಕಂಡು ಬರುತ್ತೇನೆ. 4 ಪೋಟೋಗಳನ್ನು **ನಿಪಿ.19 ರಿಂದ 22** ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದಿರುತ್ತಾರೆ.

***(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಮತ್ತು ಪಾಟಿ ಸವಾಲಿಗೆ ಒಳಪಡಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)***

**4.** ದಿಃ31.08.2018 ರಂದು ನಾನು ಎಸಿಬಿ ಪೊಲೀಸರಿಗೆ ನಿಪಿ.1 ರಂತೆ ದೂರನ್ನು ನೀಡಿದ್ದೇನೆ ಎಂದರೆ ಸರಿ . ನನ್ನ ಪಿರ್ಯಾದಿಯಲ್ಲಿ ಲೈನ್‌ಮನ್‌ಗಳು ನನ್ನ ಜಮೀನಿಗೆ ಎಸ್ಟಿಮೇಶನ್‌ಗೆ ಬಂದಿದ್ದು ವೆಂಕಟೇಶ್ ರವರನ್ನು ಬೇಟಿಯಾಗಲು ತಿಳಿಸಿದರು ಎಂದರೆ ಸರಿಯಲ್ಲ. ದಿನಾಂಕ 11.08.2018 ರಂದು ವೆಂಕಟೇಶ್ ರವರು ವಿದ್ಯುತ್ ಸಂಪರ್ಕ ಎಸ್ಟಿಮೇಶನ್ ಶಿಫಾರಸ್ಸು ಮಾಡುವ ಸಲುವಾಗಿ ರೂ.5000/- ಬೇಡಿಕೆ ಇಟ್ಟಿದ್ದರು ಎಂದರೆ ಸರಿಯಲ್ಲ. ಹಣ ಕೊಡದಿದ್ದರೆ ನಿಮ್ಮ ಎಸ್ಟಿಮೇಷನ್‌ನನ್ನು ಲೈಟ್ ಟ್ರಾನ್ಸಫರ್ ರವರಿಗೆ ವಹಿಸುತ್ತೇನೆ ಎಂದು ಹೇಳಿದರು ಎಂದರೆ ಸರಿಯಲ್ಲ. ದಿಃ29.08.2018 ರಂದು ಮದ್ಯಾಹ್ನ 12.27 ಗಂಟೆಗೆ ನಾನು ವೆಂಕಟೇಶ್ ರವರಿಗೆ ಪೋನ್ ಮಾಡಿದಾಗ ಅವರು 5000 ತೆಗೆದುಕೊಂಡು ಬಾ ಎಂದು ನನಗೆ ಹೇಳಿದರು ಎಂದರೆ ಸರಿಯಲ್ಲ. ನಾನು ಮತ್ತು ವೆಂಕಟೇಶ್ ಮಾತಾಡಿದ ಸಂಭಾಷಣೆಯನ್ನು ನನ್ನ ಇನೆವೊ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಲಂಚದ ಹಣವನ್ನು ಕೊಡಲು ನನಗೆ ಇಷ್ಟ ಇಲ್ಲದ ಕಾರಣ ನಾನು ದಿನಾಂಕ 31.08.2018 ರಂದು ಎಸಿಬಿ ಕಚೇರಿಗೆ ಹೋಗಿ ನಿಪಿ.1 ರಂತೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಎಸಿಬಿ ಕಚೇರಿಯವರು ಮದ್ಯಾಹ್ನ 3.00 ಗಂಟೆಗೆ ಚಾಸಾ.2 ಮತ್ತು 3 ಶ್ರೀನಿವಾಸಲು ಮತ್ತು ನಾಗರಾಜ ರವರನ್ನು ತಮ್ಮ ಠಾಣೆಗೆ ಕರೆಸಿಕೊಂಡರು ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು ನನಗೆ ಪಂಚರನ್ನು ಪರಿಚಯ ಮಾಡಿ ನಾನು ನೀಡಿದ ದೂರಿನ ನಕಲನ್ನು ಸದರಿ ಪಂಚರಿಗೆ ಓದಲು ಹೇಳಿ ಅವರು ಓದಿದ ನಂತರ ನಾನು ಪಿರ್ಯಾದಿಯಲ್ಲಿ ಬರೆದ ವಿಷಯಗಳು ಸರಿ ಇದೆ ಎಂದು ಖಚಿತಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು ಶ್ರೀನಿವಾಸಲು ರವರನ್ನು ಪಂಚ ನಂಃ1 ಮತ್ತು ನಾಗಾರಾಜು ರವರನ್ನು ಪಂಚ ನಂಃ2 ಎಂದು ನೇಮಕ ಮಾಡಿದರು ಎಂದರೆ ಸರಿಯಲ್ಲ. ಲಂಚ ಕೊಡಲು ತಂದಿದ್ದ 5000 ರೂಪಾಯಿಯನ್ನು ನಾನು ಹಾಜರುಪಡಿಸಿದ್ದು ಅವುಗಳಲ್ಲಿ 2000 ರೂಪಾಯಿ ಮುಖಬೆಲೆಯ 2

ನೋಟುಗಳು 500 ರೂ ಮುಖಬೆಲೆಯ 2 ನೋಟುಗಳು ಇದ್ದವು ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು ಶ್ರೀನಿವಾಸಲು ರವರಿಗೆ ನೋಟಿನ ಸಂಖ್ಯೆಯನ್ನು ಓದಲು ಹೇಳಿದ್ದು ನಾಗಾರಾಜ ರವರು ನೋಟುಗಳ ನಂಬರ್ನ್ನು ಬರೆದುಕೊಂಡರು ಎಂದರೆ ಸರಿಯಲ್ಲ. ನೋಟುಗಳ ನಂಬರ್ ನ್ನು ಬರೆದ ಬಿಳಿ ಹಾಳೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು ತಮ್ಮ ಸಿಬ್ಬಂದಿ ಮುಖಾಂತರ 2 ಡಬ್ಬಿಗಳನ್ನು ತರಿಸಿ ಒಂದು ಡಬ್ಬಿಯಲ್ಲಿ ಫಿನಾಪ್ತಲಿನ್ ಪೌಡರ್ ಡಬ್ಬಿ ಇದ್ದು , ಇನ್ನೊಂದು ಡಬ್ಬಿಯಲ್ಲಿ ಸೋಡಿಯಂ ಕಾರ್ಬೋನೇಟ್ ಪುಡಿ ಇದ್ದು ಮತ್ತು ಇನ್ನೊಂದು ನೀರಿನ ಬಾಟಲಿ ತರಿಸಿ ನಮಗೆ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು ತಮ್ಮ ಸಿಬ್ಬಂದಿ ಸೂರ್ಯನಾರಾಯಣ ರವರ ಮುಖಾಂತರ ನೋಟುಗಳಿಗೆ ಫಿನಾಪ್ತಲಿನ್ ಪೌಡರ್ ಸವರಿರುತ್ತಾರೆ ಎಂದರೆ ಸರಿಯಲ್ಲ ಫನಾಪ್ತಲಿನ್ ಪೌಡರ್ ಸವರಿದ ನೋಟುಗಳನ್ನು ಶ್ರೀನಿವಾಸಲು ರವರಿಗೆ ಎಣಿಸಲು ಕೊಟ್ಟರು ಎಂದರೆ ಸರಿಯಲ್ಲ. ಸದರಿ ಹಣವನ್ನು ಎಣಿಸಿದ ನಂತರ ಶ್ರೀನಿವಾಸಲು ರವರು ಆ ಹಣವನ್ನು ನನ್ನ ಶರ್ಟ್ ನ ಜೇಬಿನಲ್ಲಿ ಇಟ್ಟರು ಎಂದರೆ ಸರಿಯಲ್ಲ. ಒಂದು ಪಿಂಗಾಣಿ ಪಾತ್ರೆಯಲ್ಲಿ ಸೋಡಿಯ ಕಾರ್ಬೋನೇಟ್ ಮತ್ತು ನೀರನ್ನು ಹಾಕಿ ಬಣ್ಣ ರಹಿತ ದ್ರಾವಣ ತಯಾರಿಸಿದರು ಎಂದರೆ ಸರಿಯಲ್ಲ. ದ್ರಾವಣದ ಸ್ವಲ್ಪ ಭಾಗವನ್ನು ಒಂದು ಬಾಟಲಿಯಲ್ಲಿ ಹಾಕಿ ಜಪ್ತು ಮಾಡಿ ಅದಕ್ಕೆ ಆರ್ಟಿಕಲ್ 1 ಎಂದು ಗುರುತಿಸಿದರು ಎಂದರೆ ಸರಿಯಲ್ಲ. ಇನ್ನುಳಿದ ದ್ರಾವಣವನ್ನು ಪಂಚ ನಂಃ1 ಕೈಯನ್ನು ಅದ್ದಿದಾಗ ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು ಎಂದರೆ ಸರಿಯಲ್ಲ. ಆ ದ್ರಾವಣವನ್ನು ಒಂದು ಸೀಸೆಯಲ್ಲಿ ಹಾಕಿ ಜಪ್ತು ಮಾಡಿ ಆರ್ಟಿಕಲ್ ನಂಃ2 ಎಂದು ಗುರುತು ನೀಡಿದರು ಎಂದರೆ ಸರಿಯಲ್ಲ. ರಾಸಾಯನಿಕ ಪ್ರಕ್ರಿಯೆಯ ಬಗ್ಗೆ ಇನ್ಸಪೆಕ್ಟರ್ ರವರು ನನಗೆ ಮನವರಿಕೆ ಮಾಡಿಕೊಟ್ಟರು ಎಂದರೆ ಸರಿಯಲ್ಲ.

**ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.**

**ಸಾಕ್ಷಿಯನ್ನು ದಿನಾಂಕ 09.07.2024 ರಂದು ಮದ್ಯಾಹ್ನ 3.00 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದಪಾಟಿ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

**5.** ಇನ್ಸಪೆಕ್ಟರ್ ರವರು ಅಮಾನತ್ತುಪಡಿಸಿಕೊಂಡ ಸೋಡಿಯಂ ಕಾರ್ಬೋನೇಟ್ ಪುಡಿ ಮತ್ತು ಫಿನಾಪ್ತಲಿನ್ ಪೌಡರ್ ವಸ್ತುಗಳಿಗೆ ಆರ್ಟಿಕಲ್ ನಂಃ3 ಮತ್ತು 4 ಎಂದು ಗುರುತಿಸಿದರು ಎಂದರೆ ಸರಿಯಲ್ಲ. ನಾನು ನನ್ನ ಮೊಬೈಲ್ ನ್ನು ಹಾಜರುಪಡಿಸಿದ್ದು ಪೊಲೀಸರು ಅದನ್ನು ಚಾಲನೆ ಮಾಡಿ ಕೇಳಿಸಲಾಗಿ ನಾನು ಮತ್ತು ಆರೋಪಿ ದಿಃ29.08.208 ರಂದು ಸಂಭಾಷಣೆ ಮಾಡಿದ ವಿವರಗಳು ದಾಖಲಾಗಿದ್ದವು ಎಂದರೆ ಸರಿಯಲ್ಲ. ಸದರಿ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಬರೆಯಲಾಯಿತು ಎಂದರೆ ಸರಿಯಲ್ಲ. ಸದರಿ ಸಂಭಾಷಣೆಯ 2 ಸಿಡಿಗಳನ್ನು ತಯಾರಿಸಿ ಅವುಗಳಿಗೆ ಆರ್ಟಿಕಲ್ ನಂಃ5 , 5(ಎ) ಎಂದು ಗುರುತು ನೀಡಲಾಯಿತು ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು ಪಂಚ ನಂಃ1 ರವರಿಗೆ ನನ್ನ ಮತ್ತು ಆರೋಪಿಯ ನಡುವಿನ ಸಂಭಾಷಣೆಯನ್ನು ಪೂರ್ಣವಾಗಿ ಗಮನಿಸಬೇಕು ಎಂದು ಸೂಚನೆ ನೀಡಿದರು ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು ನನಗೆ ಒಂದು ವಾಯ್ಸ ರೆಕಾರ್ಡ್ ನೀಡಿ ನನ್ನ ಮತ್ತು ಆರೋಪಿಯ ನಡುವೆ ಆಗುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಬೇಕು ಎಂದು ಸೂಚನೆ ನೀಡಿದರು ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಹಣ ಪಡೆದ ನಂತರ ನಾನು ಹೊರಗಡೆ ಬಂದು ತಲೆ ಹೊರೆಸಿಕೊಳ್ಳುವ ಮೂಲಕ ಸೂಚನೆ ನೀಡಬೇಕು ಎಂದು ಹೇಳಿದರು ಎಂದರೆ ಸರಿಯಲ್ಲ. ಈ ಪ್ರಕ್ರಿಯೆ ಸಮಯದಲ್ಲಿ ನಿಪಿ.3 ರಿಂದ 10 ರಂತೆ ಫೋಟೋವನ್ನು ತೆಗೆಯಲಾಗಿದೆ ಎಂದರೆ ಸರಿಯಲ್ಲ.

**6.** ನಿಪಿ.2 ರಂತೆ ಬರೆದ ಪಂಚನಾಮೆಯಲ್ಲಿ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಂತರ ಇನ್ಸಪೆಕ್ಟರ್ ನಾನು, ಪೋಲೀಸ್ ಸಿಬ್ಬಂದಿ ಮತ್ತು ಪಂಚರು ಸೇರಿಕೊಂಡು ಸಂಜೆ 4.45 ಗಂಟೆಗೆ ಎಸಿಬಿ ಕಚೇರಿ ಬಿಟ್ಟು ಸಂಜೆ 6.00 ಗಂಟೆಗೆ ಸಂಡೂರು ಜೆಸ್ಕಾಂ ಕಚೇರಿ ತಲುಪಿದೆವು ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು ನನ್ನನ್ನು ಮತ್ತು ಪಂಚ 1 ರರನ್ನು ಆರೋಪಿಯನ್ನು ಬೇಟಿಯಾಗಲು ಕಳುಹಿಸಿಕೊಟ್ಟರು ಎಂದರೆ ಸರಿಯಲ್ಲ. ನಾನು ಆರೋಪಿ ವೆಂಕಟೇಶ್ ರವರನ್ನು ಬೇಟಿಯಾಗಿ ಕೆಲಸದ ಬಗ್ಗೆ ವಿಚಾರಿಸಿದಾಗ ಆರೋಪಿ ಹಣ ತಂದಿದ್ದೀರ ಎಂದು ಕೇಳಿದನು , ಆಗ ನಾನು , ನಾನು ತಂದಿದ್ದ ರೂ.5000- ಆರೋಪಿಗೆ ಕೊಟ್ಟಿದ್ದು ಆರೋಪಿಯು ತನ್ನ ಬಲ ಕೈಯಿಂದ ಸದರಿ ಹಣ ಪಡೆದು ಎಡ ಕೈ ಸಹಾಯದಿಂದ ಹಣವನ್ನು ಎಣಿಸಿಕೊಂಡು ಬಲಗಡೆ ಪ್ಯಾಂಟ್ನ ಜೇಬಿನಲ್ಲಿ ಇಟ್ಟನು ಎಂದರೆ ಸರಿಯಲ್ಲ. ನಾನು ಕಚೇರಿಯಿಂದ ಹೊರಗೆ ಬಂದು ಇನ್ಸಪೆಕ್ಟರ್ ಮತ್ತು ಪಂಚರಿಗೆ ಸೂಚನೆ ನೀಡಿದ್ದು , ಆಗ ದಾಳಿಗೆ ಹಾಜಾರಾದ ಸಿಬ್ಬಂದಿಗಳು ಆರೋಪಿಯ ಕಚೇರಿಗೆ (ರೆವಿನ್ಯೂ ಸೆಕ್ಷನ್) ಗೆ ಬಂದರು ಎಂದರೆ ಸರಿಯಲ್ಲ. ನಾನು ಇನ್ಸಪೆಕ್ಟರ್ ರವರಿಗೆ ಇದೇ ವ್ಯಕ್ತಿ ನನ್ನಿಂದ ಹಣ ಕೇಳಿ ಪಡೆದಿದ್ದಾನೆ ಎಂದು ತೋರಿಸಿದ್ದು , ಆಗ ಇನ್ಸಪೆಕ್ಟರ್ ರವರು ನಾನು ಕೊಟ್ಟ ಪಿರ್ಯಾದಿಯ ಬಗ್ಗೆ ಆರೋಪಿಗೆ ತಿಳಿಸಿದ್ದು , ಸಿಬ್ಬಂದಿಯ ಮುಖಾಂತರ ಸೋಡಿಯಂ ಕಾರ್ಬೋನೇಟ್ ಸಲ್ಯೂಶನ್ ತಯಾರು ಮಾಡಿ ಅದರ ಒಂದು ಭಾಗವನ್ನು ಸ್ಯಾಂಪಲ್ ಗಾಗಿ ತೆಗೆದು ಒಂದು ಬಾಟಲಿಯಲ್ಲಿ ಹಾಕಿ ಆರ್ಟಿಕಲ್ ನಂ:6 ಎಂದು ಗುರುತಿಸಿರುತ್ತಾರೆ ಎಂದರೆ ಸರಿಯಲ್ಲ. ಇನ್ನುಳಿದ ದ್ರಾವಣವನ್ನು 2 ಪಿಂಗಾಣಿ ಬಟ್ಟೆಲಿನಲ್ಲಿ ಹಾಕಿ 2 ಕೈಗಳನ್ನು ಪ್ರತ್ಯೇಕವಾ ದ್ರಾವಣ ಇರುವ ಪಿಂಗಾಣಿ ಬಟ್ಟೆಲಿನಲ್ಕ್ಲಿ ಅದ್ದಿದಾಗ ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು ಎಂದರೆ ಸರಿಯಲ್ಲ. ಸದರಿ 2 ಪಿಂಗಾಣಿಯಲ್ಲಿರುವ ದ್ರಾವಣವನ್ನು ಬೇರೆ ಬೇರೆ ಬಾಟಲಿಗಳಿಗೆ ಹಾಕಿ ಆರ್ಟಿಕಲ್ ನಂ:7,7(ಎ) ಮತ್ತು 8, 8(ಎ) ಎಂದು ಗುರುತು ನೀಡಿದರು ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು ಆರೋಪಿಗೆ ತಾನು ಪಡೆದುಕೊಂಡು

ಲಂಚದ ಹಣವನ್ನು ಹಾಜರುಪಡಿಸಲು ಕೇಳಿದಾಗ ಆರೋಪಿಯು ಅದನ್ನು ಹಾಜರುಪಡಿಸಿದ್ದು , ಆಗ ಪಂಚ 1 ಮತ್ತು 2 ರವರು ನೋಟಿನ ನಂಬರ್ ನ್ನು ನೋಡಲಾಗಿ ಮತ್ತು ಹಣವಹಿಸಿಕೊಟ್ಟ ಪಂಚನಾಮೆಯಲ್ಲಿ ಬರೆದಿರುವ ನೋಟಿನ ನಂಬರ್ ನ್ನು ತಾಳೆ ಮಾಡಿ ನೋಡಿದ್ದು ನೋಟಿನ ನಂಬರ್ ಗಳನ್ನು ಖಚಿತ ಪಡಿಸಿಕೊಂಡಿದ್ದು ಸದರಿ ಹಣವನ್ನು ಇನ್ಸಪೆಕ್ಟರ್ ರವರು ಅಮಾನತ್ತುಪಡಿಸಿಕೊಂಡು ಆರ್ಟಿಕಲ್ 9 ಎಂದು ಗುರುತು ನೀಡಿದರು ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು ಆರೋಪಿಗೆ ಪ್ರತ್ಯೇಕ ಪ್ಯಾಂಟ್ ನ ವ್ಯವಸ್ಥೆ ಮಾಡಿ ಆತನು ತೊಟ್ಟಿದ್ದ ಪ್ಯಾಂಟ್‌ನ ಜೇಬನ್ನು ಗುರುತು ಮಾಡಿ ಅಮಾನತ್ತುಪಡಿಸಿಕೊಂಡು ಸದರಿ ಆರ್ಟಿಕಲ್ ನಂಃ10 ಎಂದು ಗುರುತು ಸಂಖ್ಯೆ ನೀಡಿದರು ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ಎಲ್ಲಾ ವಸ್ತುಗಳಿಗೆ ಆರ್ ಎನ್ ಎಂದು ಸೀಲ್ ಮಾಡಲಾಯಿತು ಎಂದರೆ ಸರಿಯಲ್ಲ.

7. ಇನ್ಸಪೆಕ್ಟರ್ ರವರು ನನಗೆ ವಾಯ್ಸ ರೆಕಾರ್ಡ್ ಬಗ್ಗೆ ಕೇಳಲಾಗಿ ನಾನು ವಾಯ್ಸ ರೆಕಾರ್ಡ್ ಮಾಡಿಲ್ಲ ಎಂದು ಹೇಳಿ ವಾಯ್ಸ ರೆಕಾರ್ಡ್‌ನ್ನು ಇನ್ಸಪೆಕ್ಟರ್ ರವರಿಗೆ ವಾಪಸ್ಸು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು ಆರೋಪಿಗೆ ಆತ ಪಡೆದ ರೂ.5000/-ಗೆ ಸಂಬಂಧಿಸಿದಂತೆ ಹೇಳಿಕೆ ನೀಡಬೇಕೆಂದು ಕೇಳಲಾಗಿ ಆರೋಪಿಯು ಲಿಖಿತ ಹೇಳಿಕೆಯನ್ನು ನೀಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿಯು ನೀಡಿದ ಹೇಳಿಕೆಗೆ ನಾನು ಸಹ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

8. ಮಂಜುನಾಥರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 27 ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಅಮಾನತ್ತುಪಡಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ. ಇನ್ಸಪೆಕ್ಟರ್ ರವರು 5 , 5(ಎ) ಗಳನ್ನು ಹಣವಹಿಸಿಕೊಟ್ಟ ಪಂಚನಾಮೆ ಕಾಲಕ್ಕೆ ತೆಗೆದುಕೊಂಡು ಪುನಃ ಪರಿಶೀಲಿಸಿ ಲ್ಯಾಪಟಾಪ್ ಮೂಲಕ ಪ್ಲೇ ಮಾಡಲಾಗಿ ಚಾಸಾ.4 ರವರು ಅದನ್ನು ಕೇಳಿಸಿಕೊಂಡು ನನ್ನ ಧ್ವನಿಯನ್ನು ಗುರುತಿಸಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ

ಪೊಲೀಸರು ನಿಪಿ.12 ರಿಂದ 17 ಪೋಟೋಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ. ದಿಃ31.08.2018 ರಂದು ರಾತ್ರಿ 11.50 ಗಂಟೆಯಿಂದ 01.09.2018 ರಾತ್ರಿ 12.50 ಗಂಟೆ ವರೆಗೆ ಬರೆದಿರುತ್ತಾರೆ. ನನ್ನ ಧ್ವನಿಯ ಸ್ಯಾಂಪಲ್ ಪಡೆದುಕೊಂಡು ನಿಪಿ.18 ರಂತೆ ಪಂಚನಾಮೆ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾಯ್ಸ ರೆಕಾರ್ಡ್ ಅಪ್ಲಿಕೇಶನನ್ನು ಚಾಲನೆ ಮಾಡಿ ಲಿಪೀಕರಣದ ಹಾಳೆಯಲ್ಲಿನ ಪದಗಳನ್ನು ನನಗೆ 2 ಬಾರಿ ಓದಲು ಹೇಳಿದ್ದು ಓದಿ ಮುಗಿಸಿದ ನಂತರ ಲ್ಯಾಪ್ ಟಾಪ್ ಸಹಾಯದಿಂದ 2 ಸಿಡಿಗೆ ವರ್ಗಾಯಿಸಿ ನಮಗೆ ಕೇಳಿಸಿದರು ಎಂದರೆ ಸರಿಯಲ್ಲ. 2 ಸಿಡಿಗಳಿಗೆ ಆರ್ಟಿಕಲ್ 12 ,12(ಎ) ಎಂದು ಗುರುತಿಸಿದರು ಎಂದರೆ ಸರಿಯಲ್ಲ. ಪ್ರತಿಲೇಖದಲ್ಲಿ ನನ್ನ ಸಹಿ ಇದೆ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ19 ರಿಂದ 22 ಪೋಟೋಗಳನ್ನು ಮಾದರಿಧ್ವನಿ ಮುದ್ರಣ ಕಾಲಕ್ಕೆ ತೆಗೆದಿದ್ದಾರೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ನಡೆದ ಎಲ್ಲ ಘಟನಾವಳಿ ಬಗ್ಗೆ ದಿಃ01.09.2018 ರಂದು **ನಿಪಿ.23** ರಂತೆ ಹೇಳಿಕೇ ನೀಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಗೊತ್ತಿದ್ದರು ನಾನು ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿಯ ಪರವಾಗಿ**

**ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**